

ಅಧ್ಯಯನಗಳೇ ಆಧಾರವಾಗಿವೆ.

◆ **ನಿಮ್ಮ ಅಧ್ಯಯನ ಆಧರಿತ ಕಥಕ್ ಪ್ರಸ್ತುತಿಗಳಿಗೆ ಪ್ರತಿಕ್ರಿಯೆ ಹೇಗಿತ್ತು?**

ನಾನು ಕಲಾವಿದರ ಕುಟುಂಬದ ಹಿನ್ನೆಲೆ ಹೊಂದದೇ ಇರುವುದೇ ನನಗೆ ಸಂಶೋಧನೆ ಮಾಡಲು ಪೂರಕ ವಾತಾವರಣ ಒದಗಿಸಿತು. ಸಾಂಪ್ರದಾಯಿಕ ಪದ್ಧತಿಗಳನ್ನು ಪ್ರಶ್ನಿಸುವ ಧೈರ್ಯವನ್ನು ನಾನು ಬೆಳೆಸಿಕೊಂಡೆ. ಆದ್ದರಿಂದಲೇ ನನ್ನ ಅನೇಕ ಪ್ರಸ್ತುತಿಗಳು ನನ್ನದೇ ಸಂಶೋಧನೆಯನ್ನು ಆಧರಿಸಿ ರೂಪುಗೊಂಡಿವೆ. ಸೂಫಿ ಕಥಕ್ ಎಂಬ ಹೊಸ ಪರಿಕಲ್ಪನೆಯನ್ನು ನಾನು ರೂಪಿಸಿದಾಗ, ವೇದಿಕೆ ಮೇಲಿನ ಪ್ರಸ್ತುತಿಯನ್ನು ಹೇಗೆ ಸ್ವೀಕರಿಸಬೇಕು ಎಂದು ಪ್ರೇಕ್ಷಕರು ಸ್ವಲ್ಪ ತಬ್ಬಿಬ್ಬಾಗಿರಬಹುದು. ಯಾಕೆಂದರೆ ಶಾಸ್ತ್ರೀಯ ಕಲಾಪ್ರಕಾರಗಳನ್ನು ಸ್ವೀಕರಿಸಲು, ಆನಂದಿಸಲು ತಕ್ಕಮಟ್ಟಿಗಿನ ಪೂರ್ವ ಜ್ಞಾನ ಬೇಕು. ಅದು ನಿಧನಿಧಾನವಾಗಿ ಬರುವಂಥದು. ನಾನು ಕಥಕ್ ಕಲಾವಿದೆ ಎಂದು ಹೇಳಿಕೊಂಡು, ಸಾಮಾನ್ಯವಾಗಿ ಜನಮಾನಸದಲ್ಲಿ ಅಚ್ಚೊತ್ತಿದ ಕಥಕ್‌ಗೆ ಬದಲಾಗಿ ತುಸು ವಿಭಿನ್ನ ರೀತಿಯ ನೃತ್ಯವನ್ನು ಪ್ರಸ್ತುತಪಡಿಸಿದಾಗ ಜನರೂ ಅದರ ಬಗ್ಗೆ ತಿಳಿದುಕೊಳ್ಳಲು ಸಮಯ ತೆಗೆದುಕೊಂಡರು. ಆದರೆ ಇದೀಗ 27 ವರ್ಷಗಳ ದೀರ್ಘಕಾಲದ ನನ್ನ ಪ್ರಯಾಣವು, ಸೂಫಿ ಕಥಕ್ ಎಂದರೇನೆಂದು ಜನರಿಗೆ ತಿಳಿಸಿಕೊಡುವಲ್ಲಿ ಯಶಸ್ವಿಯಾಗಿದೆ ಎಂದುಕೊಂಡಿದ್ದೇನೆ. ಯಾಕೆಂದರೆ ಒಂದು ಕಾಲದಲ್ಲಿ ಕಪ್ಪುದಿರಿಸು ಧರಿಸಿ ಕವ್ವಾಲಿಯ ಹಾಡಿನೊಂದಿಗೆ ನಾನು ನೃತ್ಯ ಮಾಡುತ್ತಿದ್ದಾಗ ಸಿಕ್ಕಾಪಟ್ಟೆ ಟೀಕೆಗಳನ್ನು ಎದುರಿಸಿದ್ದೆ. ಟೀಕಾಕಾರರಿಗೆ ನನ್ನ ನೃತ್ಯದಲ್ಲಿ ತಾಳ, ಲಯ, ಹೆಜ್ಜೆಗಾರಿಕೆಯಲ್ಲಿ ತಪ್ಪುಗಳು ಕಾಣಿಸದೇ ಇದ್ದಾಗ ಅವರು ಪ್ರಯತ್ನವನ್ನು ನಿಲ್ಲಿಸುವ ನಿಟ್ಟಿನಲ್ಲಿ ಚಾರಿತ್ರ್ಯವನ್ನೇ ಪ್ರಶ್ನಿಸುವ ಮಟ್ಟಕ್ಕೆ ಇಳಿದುಬಿಡುತ್ತಾರೆ. ಆದರೆ ನನ್ನ ಪ್ರತಿಯೊಂದು ಪ್ರಯತ್ನವೂ ನನ್ನ ಅಧ್ಯಯನವನ್ನು ಆಧರಿಸಿದ್ದು ಮತ್ತು ಆ ಬಗ್ಗೆ ನಾನು ಯಾವುದೇ ಪ್ರಶ್ನೆಗಳಿಗೆ ಉತ್ತರಿಸಬಲ್ಲವಳಾಗಿದ್ದೆ. ಹೀಗೆ ಎಲ್ಲ ಎಲ್ಲೆಗಳನ್ನು ದಾಟಿ ಬಂದ ನಂತರ ಈಗ ನೋಡಿದರೆ ಇತರರೂ ಸೂಫಿ ಕಥಕ್ ಅನ್ನು ಪ್ರಸ್ತುತಪಡಿಸುತ್ತಿದ್ದಾರೆ. ಅಲ್ಲದೆ ಕಪ್ಪು ದಿರಿಸು ಧರಿಸಿ ವೇದಿಕೆ ಏರಬಾರದು ಎಂಬ ಕುರುಡು ನಂಬಿಕೆಯನ್ನು ದಾಟುವ ಧೈರ್ಯ ಮಾಡಿದ್ದಾರೆ.

◆ **ಹೊಸ ತಲೆಮಾರಿನ ಕಲಾವಿದರು ಅಧ್ಯಯನ ಆಧರಿತ ನೃತ್ಯ ಪ್ರಸ್ತುತಿಯನ್ನು ಮುಂದುವರೆಸುತ್ತಿದ್ದಾರೆಯೇ?**

ಶಾಸ್ತ್ರೀಯ ನೃತ್ಯ ಪ್ರಕಾರಗಳು ನಿಂತ ನೀರಿನಂತೆ